

'ದುಬೈ ಫ್ರೇಮ್' ಮೂಲಕ ಕಾಣಿಸಿದ ದುಬೈ ಪಕ್ಷಿನೋಟ



ದುಬೈ ಫ್ರೇಮ್‌ನ ಒಂದು ಪಾರ್ಶ್ವನೋಟ

ಕೇವಲ 75 ಸೆಕೆಂಡ್‌ಗಳಲ್ಲಿ ಇವು ನಮ್ಮನ್ನು ಮೇಲಕ್ಕೊಯ್ಯಬಲ್ಲವು ಮತ್ತು ಕೆಳಕ್ಕೆ ತರಬಲ್ಲವು.

ಲಂಬ ಬಾಹುಗಳನ್ನು ಸೇತುವೆಯಂತೆ ಜೋಡಿಸುವ ಮೇಲಿನ ಫ್ರೇಮಿನ ನೆಲ ಗಾಜಿನದು. 150 ಮೀಟರ್ ಆಳದ ದೃಶ್ಯಗಳನ್ನು ಅದು ನಮಗೆ ಕಾಣಿಸುತ್ತದೆ. ಕೆಳಗೆ ಕಾರಂಜಿಗಳು ಚಿಮ್ಮುವುದನ್ನು ಕಾಣಬಹುದು. ಗಾಜಿನ ನೆಲದ ಮೇಲೆ ಹೆಜ್ಜೆ ಇಡಲು ಆತಂಕವಾಗುತ್ತದೆ. ಅದು ಒಂದು ವೇಳೆ ಭದ್ರವಿಲ್ಲದಿದ್ದರೆ ಎಂದು ಅನುಮಾನಿಸುತ್ತಲೇ ವಿಲಕ್ಷಣ ಎಚ್ಚರಿಕೆಯಿಂದ ನಡೆಯುತ್ತೇವೆ. ನಮ್ಮ ಹಾಗೆ ಇತರ ಪ್ರವಾಸಿಗರೂ ಹೀಗೆ ಗಾಬರಿಗೊಂಡು ವರ್ತಿಸುವುದನ್ನು ಕಂಡೆವು. ಆದರೆ ಈ ಆತಂಕವೂ ಒಂದು ಮೈನವಿರೇಳಿಸುವ ಥ್ರಿಲ್ ಎನ್ನಬೇಕು. ಇನ್ನೊಂದು ವಿಶೇಷವೆಂದರೆ ನಾವು ನಡೆದಂತೆ ಗಾಜಿನ ನೆಲ ಪಾರದರ್ಶಕವೂ ಆಗಿಬಿಡುತ್ತದೆ ಅಪಾರದರ್ಶಕವಾಗಿಯೂ ಆಗಿಬಿಡುತ್ತದೆ. ನೆತ್ತಿಯ ಮೇಲಿನ ಛಾವಣಿಯಲ್ಲೂ ಬಣ್ಣಬಣ್ಣದ ಬೆಳಕಿನ ಸಾಲುಗಳು ಉದ್ದದ ಚಾಪೆ ಬಿಚ್ಚಿಕೊಂಡಂತೆ ಬಿಚ್ಚಿಕೊಳ್ಳುತ್ತ ಸಾಗುತ್ತವೆ.

ಫ್ರೇಮಿನ ಅಷ್ಟೆತ್ತರದಲ್ಲಿ ನಿಂತು ಒಂದು ಕಡೆ ನೋಡಿದರೆ ಜಗತ್ತಿನ ನಂಬರ್ 1 ಗಗನಚುಂಬಿ ಕಟ್ಟಡ 'ಬುರ್ಜ್ ಖಲೀಫಾ' ಜೊತೆಗೆ ಆಧುನಿಕಗೊಂಡ ದಕ್ಷಿಣ ದಿಕ್ಕಿನ ದುಬೈ ಕಾಣುತ್ತದೆ. ಉತ್ತರದ ಕಡೆ ಗಗನಚುಂಬಿಗಳಿಲ್ಲದ ಹಳೆಯ ದುಬೈ ಕಾಣುತ್ತದೆ. ಪೂರ್ತಿ ಹೊರಬಂದು ದೂರದಿಂದ ಫ್ರೇಮನ್ನು ನೋಡಿದರೆ ಅದು ನೀಲಿ ಆಕಾಶದ ಹಿನ್ನೆಲೆಗೆ ನಗರದ ಒಂದಲ್ಲ ಒಂದು ದೃಶ್ಯವನ್ನು ತನ್ನೊಳಗೆ ಇರಿಸಿಕೊಂಡು ಬೃಹತ್ ಫೋಟೊ ಆಗಿ ಗೋಚರಿಸುತ್ತದೆ.

## ತ್ರಿಕಾಲಗಳ ನಡುವೆ

'ದುಬೈ ಫ್ರೇಮ್' ಯಥೇಚ್ಛ ಗಾಜು, ಉಕ್ಕು, ಅಲ್ಯುಮಿನಿಯಮ್ ಮತ್ತು ಸಿಮೆಂಟುಗಳ ಭಾರೀ ಸಂಗಮ. ದುಬೈ ಮುನ್ಸಿಪಾಲಿಟಿಯ ಮಹತ್ವಾಕಾಂಕ್ಷೆಯ ವಾಸ್ತುಶಿಲ್ಪ ಇದು. 2013ರಲ್ಲಿ ಇದರ ಕಾಮಗಾರಿ ಶುರುವಾಗಿ 2017ಕ್ಕೆ ಮುಗಿಯಿತು. 2018ರ ಜನವರಿ 1ರಂದು ಜಗತ್ತಿಗೆ ಅಧಿಕೃತವಾಗಿ ಇದರ ಬಾಗಿಲು ತೆರೆಯಿತು. ಫ್ರೇಮಿನೊಳಗೆ ಕೊಂಚ ನಡೆದು ಜಲಪಾತದ ಭ್ರಮೆ ಮೂಡಿಸುವ ದ್ವಾರವನ್ನು ದಾಟಿದ ಕೂಡಲೇ ಒಂದು ಪುಟ್ಟ ಮ್ಯೂಸಿಯಂ ಎದುರಾಗುತ್ತದೆ. ಅಲ್ಲಿ 3ಡಿ ತಂತ್ರಜ್ಞಾನದ ಮೂಲಕ ದುಬೈನ ಬೆಳವಣಿಗೆಯು ಸ್ಥಳೀಯ ಅಲೆಮಾರಿ ಬೆದೋಯಿನ್ ಜನರ ವ್ಯಾಪಾರ, ಮೀನುಗಾರಿಕೆಯನ್ನು ಅವಲಂಬಿಸಿದ ಜೀವನಶೈಲಿಯಿಂದ ಶುರುವಾಗಿ ಅತ್ಯಾಧುನಿಕ ಕಾಸ್ಮೋಪಾಲಿಟನ್ ನಗರಕ್ಕೆ ಹೊಂದಿಕೊಳ್ಳುವಂತೆ ಅವರು ಪರಿವರ್ತನೆ ಹೊಂದಿದ ಚರಿತ್ರೆಯನ್ನು ಆಪ್ತವಾಗಿ ನಮ್ಮೆದುರು ತೆರೆದಿಡುತ್ತದೆ.

ಫ್ರೇಮಿನ ಇನ್ನೊಂದೆಡೆ ಮಿಥ್ಯಾವಾಸ್ತವ (Virtual reality) ತಂತ್ರಜ್ಞಾನದ ಮೂಲಕ 2050ರಲ್ಲಿ ದುಬೈ ಹೇಗಿರಬಹುದೆಂಬ ಮುನ್ನೋಟ ತೋರಿಸಲಾಗುತ್ತದೆ. ಹಾರುವ ಟ್ಯಾಕ್ಸಿಗಳು, ಚಾಲಕರಹಿತ ವಾಹನಗಳು, ಮನುಷ್ಯರ ಕೆಲಸವನ್ನು ಮಾಡುವ ರೋಬೋಟ್‌ಗಳು, ಡ್ರೋನ್‌ಗಳ ಕಾರ್ಯಾಚರಣೆ, ಹೈಪರ್‌ಲೂಪ್ ಸಾರಿಗೆ ವ್ಯವಸ್ಥೆ, ಮಂಗಳ ಗ್ರಹಕ್ಕೆ ದುಬೈನಿಂದ ಪಯಣಿಸುವ ವ್ಯವಸ್ಥೆ – ಓಹ್! ಒಂದೇ ಎರಡೇ ಕನಸುಗಳು! ಇವೆಲ್ಲವನ್ನು ಸುಮ್ಮನೆ ಪ್ರದರ್ಶಿಸುವುದಿಲ್ಲ. ನಾವು ಅವುಗಳ ಜೊತೆಜೊತೆಯೆ ನಿಂತು ನೋಡುತ್ತಿದ್ದೇವೇನೋ ಎಂಬ ಭಾವನೆ ಮೂಡುತ್ತದೆ. ಮೂಗಿಗೆ ಸವಿಪರಿಮಳದ ಅನುಭವವಾಗುತ್ತದೆ. ಕಿವಿಯ ಹತ್ತಿರವೇ ಸದ್ದು ಕೇಳಿದಂತಾಗುತ್ತದೆ. ಕೈಚಾಚಿದರೆ ರೋಬೋಟ್‌ಗಳು, ಡ್ರೋನ್‌ಗಳು ಸಿಕ್ಕೇಬಿಟ್ಟವು ಅನ್ನಿಸುತ್ತೆ. ನಾವೇ ಉಡಾಯಿಸಿದೇವೇನೋ ಎಂಬಂತೆ ನೌಕೆಯೊಂದು ಮಂಗಳ ಗ್ರಹಕ್ಕೆ ಪಯಣಿಸುತ್ತದೆ! ಹೀಗೆ ಏಕ ಕಾಲಕ್ಕೆ ಭೂತಕಾಲದ ದೃಶ್ಯ ಮತ್ತು ಭವಿಷ್ಯದ ನೋಟಗಳನ್ನು ನಮ್ಮೆದುರು ಮಂಡಿಸಲಾಗುತ್ತದೆ.

ವರ್ತಮಾನದ ದುಬೈ ನಗರವಂತೂ ಕಣ್ಣಳತೆಗೆ ಭವ್ಯವಾಗಿ ದಕ್ಕುತ್ತದೆ. ಹೀಗೆ ಮೂರೂ ಕಾಲಗಳನ್ನು ಒಂದೆಡೆ ಕ್ರೋಡೀಕರಿಸಿದ ಪರಿಕಲ್ಪನೆಯೇ 'ದುಬೈ ಫ್ರೇಮ್' ಅನ್ನು ಅನನ್ಯಗೊಳಿಸಿದೆ.

ಫ್ರೇಮಿನ ಒಳಪ್ರವೇಶಿಸುತ್ತಿದ್ದಂತೆ ಒಂದೆಡೆ ಲಯಬದ್ಧ ಚಲನೆಯನ್ನು ಪ್ರದರ್ಶಿಸುವ ಬಿಡಿಬಿಡಿ ಪಟ್ಟಿಗಳಿಂದ ಉದ್ದಕ್ಕೆ ಜೋಡಿಸಲ್ಪಟ್ಟ ಲೋಹದ ರಚನೆಯನ್ನು ಛಾವಣಿಯಿಂದ ಇಳಿಬಿಡಲಾಗಿದೆ. ಬೇರೆ ಬೇರೆ ಕೋನಗಳಿಂದ ನೋಡಿದಾಗ ಹಕ್ಕಿ, ಮೊಸಳೆ, ಮೀನು ಹೀಗೆಲ್ಲ ಆಕಾರ ಬದಲಿಸುವ ಈ ಲೋಹದ ರಚನೆ ಒಂದೊಳ್ಳೆಯ ಸುಂದರ ಕಲ್ಪನೆ. ಇನ್ನೊಂದು ಕಡೆ ದೊಡ್ಡ ಕ್ಯಾಮೆರಾದ ಪರದೆಯನ್ನು ನಿಲ್ಲಿಸಿದ್ದಾರೆ. ಅದರೆದುರು ನಿಂತು ನಮ್ಮ ಸೆಲ್ಫೀ ತೆಗೆದು ನಮ್ಮ ಭಾವಚಿತ್ರವನ್ನು ಅದರೊಳಗೇ ಸೇವ್ ಮಾಡಿಟ್ಟು ಬರಬಹುದು. ದುಬೈ ಫ್ರೇಮಿಗೆ ಭೇಟಿಕೊಟ್ಟವರನ್ನು ಅದು ನೆನಪಿಟ್ಟುಕೊಳ್ಳುತ್ತದೆ.

ದುಬೈ ಫ್ರೇಮ್‌ನ ಆಕರ್ಷಣೆಗಳು ಸುಲಭದ ಬಣ್ಣನೆಗೆ ನಿಲುಕುವಂತಹವಲ್ಲ. ಅವುಗಳನ್ನು ಅನುಭವಿಸಿಯೇ ತಿಳಿಯಬೇಕು. ದುಬೈ ಪ್ರವಾಸದ ಅವಕಾಶ ದೊರೆತಲ್ಲಿ, ಈ ಫ್ರೇಮ್‌ನ ಭಾಗವಾಗುವ ಸಾಧ್ಯತೆಯನ್ನು ತಪ್ಪಿಸಿಕೊಳ್ಳಬೇಡಿ.

'ದುಬೈ ಫ್ರೇಮ್' ಚೆಲುವಿಗೆ ಚಿತ್ತಾರ ಬಿಡಿಸುತ್ತಿರುವ ಕಾರಂಜಿಗಳು

